SCCH – 01
MVC No.6700/2023
PW1

**<u>ದಿನಾಂಕಃ 02.09.2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತುಃ</u>**

**<u>ಪಾಟೀ ಸವಾಲು: 2 ನೇ ಎದುರುದಾರರ ಪರ ವಕೀಲರಾದ Smt.PSU ರವರಿಂದಃ</u>**

1) ಅಪಘಾತದ ಸಮಯದಲ್ಲಿ ನಾನು ಕಣಿಮಿಣಿಕೆ ಕಡೆಯಿಂದ ಕೆಂಗೇರಿ ಕಡೆಗೆ ಹೋಗುತ್ತಿದ್ದೆನು. ನಾನು ಅಪಘಾತದ ಸಮಯದಲ್ಲಿ ನಡೆದುಕೊಂಡು ಹೋಗುತ್ತಿದ್ದೆನು. ಅಪಘಾತವನ್ನು ಮಾಡಿದಂತಹ ವಾಹನವು ನನ್ನ ಹಿಂದಿನಿಂದ ಬಂದು ನನಗೆ ಡಿಕ್ಕಿ ಹೊಡೆದಿದೆ. ಅಪಘಾತದ ಸಮಯದಲ್ಲಿ ನಾನು ಮುಖ್ಯ ರಸ್ತೆಯ ಮೇಲೆ ಹೋಗುತ್ತಿದ್ದೆನು ಎಂದರೆ ಸುಳ್ಳು. ಸಾಕ್ಷಿಯು ಮುಂದುವರೆದು "ರಸ್ತೆಯ ಪಕ್ಕದಲ್ಲಿ ಇರುವ ಬಿಳಿಯ ಪಟ್ಟೆ ಹಾಕಿರುವಂತಹ ಸ್ಥಳದಲ್ಲಿ ನಡೆದುಕೊಂಡು ಹೋಗುತ್ತಿದ್ದೆನು" ಎಂದು ನುಡಿದಿದ್ದಾರೆ.

2) ಯಾವ ರಸ್ತೆಯಲ್ಲಿ ಅಪಘಾತವು ಆಗಿದೆಯೋ ಆ ರಸ್ತೆಯ ಎರಡೂ ಪಕ್ಕಗಳಲ್ಲಿ ಫುಟ್ ಪಾತ್ (ಪಾದಚಾರಿ ಮಾರ್ಗ) ಇದೆ ಎಂದರೆ ಹೇಳಲು ಆಗುವುದಿಲ್ಲ. ನಿ.ಪಿ.2 ದಾಖಲೆಯಲ್ಲಿ ಬರೆದಿರುವ ಮಾಹಿತಿಯ ಪ್ರಕಾರ ಅಪಘಾತವು ಆದ ಸ್ಥಳದಲ್ಲಿ ಫುಟ್ ಪಾತ್ ಇದೆ ಎಂದು ಬರೆದಿದೆ ಎಂದರೆ ಇರಬಹುದು.

3) ನಾನು ರಸ್ತೆಯ ಮೇಲೆ ಹೋಗುತ್ತಿದ್ದೆನು ಮತ್ತು ಆ ಕಾರಣದಿಂದಲೇ ಅಪಘಾತವು ಆಗಿದೆ ಎಂದರೆ ಸುಳ್ಳು . ಕೆಂಗೇರಿಗೆ ಹೋಗುವ ರಸ್ತೆಯು ಯಾವಾಗಲೂ ವಾಹನ ದಟ್ಟಣೆಯಿಂದ ಕೂಡಿರುತ್ತದೆ ಮತ್ತು ನಾನು ರಸ್ತೆಯ ಮಧ್ಯದಲ್ಲಿ ಹೋಗುತ್ತಿದ್ದೆನು ಮತ್ತು ಆ ಕಾರಣದಿಂದಲೇ ಅಪಘಾತವು ಆಗಿದೆ ಎಂದರೆ ಸುಳ್ಳು.

4) ಆ ಸದರಿ ಅಪಘಾತದಲ್ಲಿ ನನ್ನ ಎರಡೂ ಕಾಲುಗಳ ಮೇಲೆ ಮತ್ತು ಎರಡು ಕೈಗಳ ಮೇಲೆ ಮತ್ತು ಎಡಭುಜದ ಮೇಲೆ, ಹಣೆಯ ಮೇಲೆ ಮತ್ತು ಬೆನ್ನಿನ ಮೇಲೆ ಗಾಯಗಳು ಆಗಿದ್ದವು. ಅಪಘಾತದ ನಂತರ ಯಾರು ನನ್ನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾರೆ ಎಂದು ನನಗೆ ಗೊತ್ತಿಲ್ಲ ಕಾರಣ ನನಗೆ ಪ್ರಜ್ಞೆ ಹೋಗಿತ್ತು.

5) ಅಪಘಾತ ಆದ ನಂತರ **3** ದಿನಗಳ ಕಾಲ ನನಗೆ ಪ್ರಜ್ಞೆ ಇರಲಿಲ್ಲ ಎಂಬುದಾಗಿ ನಾನು ಸುಳ್ಳು ಪ್ರತಿಪಾದನೆಯನ್ನು ಮಾಡುತ್ತಿದ್ದೇನೆ ಎಂದರೆ ಸುಳ್ಳು. ದಿಃ **14.08.2023** ರಂದು ನಾನೇ ಪೋಲಿಸರಿಗೆ ದೂರು ಕೊಟ್ಟಿದ್ದೇನೆ ಎಂದರೆ ಸರಿ. ಪೋಲಿಸರಿಗೆ ನೀಡಿದ ದೂರಿನಲ್ಲಿ ಏನು ಬರೆದಿದೆ ಎಂದು ಓದಿಸಿ ತಿಳಿದುಕೊಂಡು ನಂತರ ನನ್ನ ಸಹಿಯನ್ನು ಮಾಡಿದ್ದೇನೆ. ನಾನು ಆಸ್ಪತ್ರೆಯಲ್ಲಿ ಇದ್ದಾಗ ಪೋಲಿಸರು ಬಂದು ನನ್ನ ಹೇಳಿಕೆಯನ್ನು ಪಡೆದುಕೊಂಡಿದ್ದಾರೆ.

6) ಕೆಂಗೇರಿಯ ಬಳಿ ಇರುವ ರಾಜರಾಜೇಶ್ವರಿ ಆಸ್ಪತ್ರೆಯಲ್ಲಿ ನಾನು ಚಿಕಿತ್ಸೆಯನ್ನು ಪಡೆದಿದ್ದೇನೆ. ಮೊದಲನೇ ಶಸ್ತ್ರ ಚಿಕಿತ್ಸೆಯನ್ನು ಮಾಡುವ ಸಮಯದಲ್ಲಿ **12** ದಿನಗಳ ಕಾಲ ಮತ್ತು ಎರಡನೇ ಶಸ್ತ್ರ ಚಿಕಿತ್ಸೆಯನ್ನು ಮಾಡುವ ಸಮಯದಲ್ಲಿ **6** ದಿನಗಳ ಕಾಲ ಮತ್ತು ಮೂರನೇ ಶಸ್ತ್ರ ಚಿಕಿತ್ಸೆಯನ್ನು ಮಾಡುವ ಸಮಯದಲ್ಲಿ **8** ದಿನಗಳ ಕಾಲ ನಾನು ಆಸ್ಪತ್ರೆಯಲ್ಲಿ ಇದ್ದೆನು.

7) ನಾನು ಮೊದಲನೇ ಬಾರಿಗೆ ಕೇವಲ **3** ದಿನಗಳ ಕಾಲ ಮಾತ್ರ ಒಳರೋಗಿಯಾಗಿ ಚಿಕಿತ್ಸೆ ಪಡೆದಿದ್ದೇನೆ ಮತ್ತು ಈಗ **12** ದಿನಗಳ ಕಾಲ ಒಳರೋಗಿಯಾಗಿ ಚಿಕಿತ್ಸೆ ಪಡೆದಿದ್ದೇನೆ ಎಂಬುದಾಗಿ ನಾನು ಸುಳ್ಳು ಪ್ರತಿಪಾದನೆಯನ್ನು ಮಾಡುತ್ತಿದ್ದೇನೆ ಎಂದರೆ ಸುಳ್ಳು.

8) ನನ್ನ ಕಾಲುಗಳನ್ನು ಅಲುಗಾಡಿಸಲು ಸಾಧ್ಯ ಆಗುತ್ತಿರಲಿಲ್ಲ ಮತ್ತು ಆ ಕಾರಣದಿಂದ ನಾನು ಎರಡನೇ ಬಾರಿಗೆ ಆಸ್ಪತ್ರೆಗೆ ದಾಖಲು ಆದೆನು. **2024** ನೇ ಇಸವಿಯಲ್ಲಿ ನಾನು **2** ನೇ ಬಾರಿಗೆ ಆಸ್ಪತ್ರೆಗೆ ದಾಖಲು ಆಗಿದ್ದೆನು. ಮೊದಲನೇ ಬಾರಿಗೆ ಆಸ್ಪತ್ರೆಗೆ ದಾಖಲು ಆಗಿ ಆಸ್ಪತ್ರೆಯಿಂದ ಬಿಡುಗಡೆ ಆದ ನಂತರ ನನಗೆ ಓಡಾಡಲು ಸಾಧ್ಯ ಇತ್ತು ಎಂದರೆ ನಾನು ಕೋಲು ಹಿಡಿದುಕೊಂಡು ನಡೆದಾಡುತ್ತಿದ್ದೆನು, ಆ ಕಾರಣದಿಂದ ನಾನು **2** ನೇ ಬಾರಿಗೆ ಆಸ್ಪತ್ರೆಗೆ ಹೋಗಿ ದಾಖಲು ಆದೆನು.

9) ನನ್ನ ಸೊಂಟದಲ್ಲಿ ಇರುವ ಮೂಳೆಯನ್ನು ತೆಗೆದು ನನ್ನ ಕಾಲಿಗೆ ಆ ಮೂಳೆಯನ್ನು ಅಳವಡಿಸಿದ್ದಾರೆ ಮತ್ತು ಆ ಕಾರಣಕ್ಕಾಗಿ ನಾನು **3** ನೇ ಬಾರಿಗೆ ಆಸ್ಪತ್ರೆಗೆ ದಾಖಲು ಆಗಿದ್ದೆನು.

10) ಮೊದಲನೇ ಬಾರಿಗೆ ನಾನು ಆಸ್ಪತ್ರೆಯಿಂದ ಬಿಡುಗಡೆ ಆಗುವ ಸಮಯದಲ್ಲಿ ವೈದ್ಯರು ನನಗೆ **physiotherapy** ತೆಗೆದುಕೊಳ್ಳಬೇಕು ಎಂದು ಸಲಹೆ ಕೊಟ್ಟಿದ್ದರು ಮತ್ತು ನಾನು ವೈದ್ಯರ ಸಲಹೆ ಸೂಚನೆಗಳನ್ನು ಪಾಲನೆ ಮಾಡಿರುವುದಿಲ್ಲ ಮತ್ತು ಆ ಕಾರಣದಿಂದಲೇ ನನ್ನ ಸಮಸ್ಯೆಗಳು ಹೆಚ್ಚಾಯಿತು ಎಂದರೆ ಸರಿಯಲ್ಲ. ನಾನು ಆ ರೀತಿ **physiotherapy** ಪಡೆದುಕೊಂಡಿದ್ದೇನೆ ಎನ್ನುವ ಸಂಬಂಧ ದಾಖಲೆಗಳು ಇವೆಯೋ ಹೇಗೆ ಎಂದರೆ ಆ ದಾಖಲೆಗಳು ನಮ್ಮ ಊರಿನಲ್ಲಿ ಇದೆ.

11) ನಾನು ಹೇಳಿದ ಹಾಗೆ ನಾನು **physiotherapy** ಅನ್ನು ಮಾಡಿಸಿಕೊಂಡಿರುವುದಿಲ್ಲ ಮತ್ತು ಈಗ ಈ ನ್ಯಾಯಾಲಯದ ಮುಂದೆ ಸುಳ್ಳು ಪ್ರತಿಪಾದನೆಯನ್ನು ಮಾಡುತ್ತಿದ್ದೇನೆ ಎಂದರೆ ಸುಳ್ಳು.

12) ನನ್ನ ಕಾಲುಗಳಿಗೆ ಅಳವಡಿಸಲಾಗಿದ್ದಂತಹ **implants** ಗಳನ್ನು ತೆಗೆಯಲಾಗಿದೆ ಎಂದರೆ ಸುಳ್ಳು. ಸುಮಾರು **3** ತಿಂಗಳ ಹಿಂದೆ ನಾನು ಕಡೆಯ ಬಾರಿಗೆ **physiotherapy** ಪಡೆಯಲು ಹೋಗಿದ್ದೆನು. ನಾನು

ರಾಜ ರಾಜೇಶ್ವರಿ ಆಸ್ಪತ್ರೆಯಲ್ಲಿಯೇ **physiotherapy** ಅನ್ನು ಪಡೆದುಕೊಳ್ಳುತ್ತಿದ್ದೇನೆ.

13) ನಾನು ಹೇಳಿದ ಹಾಗೆ ನನಗೆ ಯಾವುದೇ ತೊಂದರೆಗಳು ಇರುವುದಿಲ್ಲ ಎಂದರೆ ಸುಳ್ಳು. ನನ್ನ ಚಿಕಿತ್ಸೆಗಾಗಿ ಮತ್ತು ಓಡಾಟದ ಖರ್ಚಿಗಾಗಿ ಮತ್ತು ನನ್ನನ್ನು ನೋಡಿಕೊಳ್ಳಲು ಬರುವ ವ್ಯಕ್ತಿಯ ಸಂಬಳ ಎಲ್ಲವೂ ಸೇರಿ ನನಗೆ **1.5** ಲಕ್ಷ ರೂಪಾಯಿ ಖರ್ಚಾಗಿದೆ ಎಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ನನಗೆ ಅದಕ್ಕಿಂತ ಹೆಚ್ಚಿನ ಹಣ ಖರ್ಚಾಗಿದೆ.

14) ಅಪಘಾತಕ್ಕಿಂತ ಮೊದಲು ನಾನು ಕೆಲಸ ಮಾಡುತ್ತಿದ್ದೆನು ಮತ್ತು ಒಂದು ದಿನಕ್ಕೆ **700** ರೂಪಾಯಿ ಸಂಪಾದನೆ ಮಾಡುತ್ತಿದ್ದೆನು ಎಂಬುದಾಗಿ ನಾನು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸುಳ್ಳು. ಅಪಘಾತ ಆದ ನಂತರ ನಾನು ಯಾವುದೇ ಕೆಲಸವನ್ನು ಮಾಡುತ್ತಿಲ್ಲ. ನಾನು ಹಾಜರುಪಡಿಸಿರುವಂತಹ ನಿ.ಪಿ. **9** ರಲ್ಲಿ ಕ್ರಮ ಸಂಖ್ಯೆ **3** ರಿಂದ **6, 8, 10, 12, 13, 14, 16, 18, 23** ರಿಂದ **41, 26** ರಿಂದ **28, 35** ರಿಂದ **50** ಗಳಲ್ಲಿ ಯಾವುದೇ ಅಧಿಕೃತವಾದ ಸಹಿಗಳು ಇರುವುದಿಲ್ಲ ಎಂದರೆ ಸುಳ್ಳು. ನಿ.ಪಿ.**9** ರಲ್ಲಿಯೇ ಕ್ರಮ ಸಂಖ್ಯೆ **57** ರಿಂದ **83** ರಲ್ಲಿ ಇರುವ ಬಿಲ್ಲುಗಳು ಔಷದಿಗಳನ್ನು ವಾಪಸ್ಸು ಕೊಟ್ಟಿರುವ ಬಗ್ಗೆ ಇರುವ ರಶೀದಿಗಳು ಆಗಿವೆ ಮತ್ತು ಅವುಗಳನ್ನೂ ಸಹಾ ನಾನು ದುರುಪಯೋಗ

ಪಡಿಸಿಕೊಳ್ಳಲು ಈ ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದೇನೆ ಎಂದರೆ ಸುಳ್ಳು. ಅಪಘಾತಕ್ಕಿಂತ ಮೊದಲು ನಾನು ಕೆಲಸ ಮಾಡುತ್ತಿದ್ದೆನು ಮತ್ತು ಒಂದು ತಿಂಗಳಿಗೆ **21** ಸಾವಿರ ರೂಪಾಯಿಗಳನ್ನು ಸಂಪಾದನೆ ಮಾಡುತ್ತಿದ್ದೆನು ಎಂಬುದಾಗಿ ನಾನು ಸುಳ್ಳು ಪ್ರತಿಪಾದನೆಯನ್ನು ಮಾಡುತ್ತಿದ್ದೇನೆ ಎಂದರೆ ಸುಳ್ಳು.

15) ಅಪಘಾತವು ನನ್ನ ತಪ್ಪಿನಿಂದಲೇ ಆಗಿದೆ ಮತ್ತು ಪರಿಹಾರವನ್ನು ಪಡೆದುಕೊಳ್ಳಬೇಕು ಎಂಬ ದುರುದ್ದೇಶದಿಂದ ನಾನು ಪೋಲಿಸರ ಜೊತೆ ಶಾಮೀಲಾಗಿ ನಾನು ಸುಳ್ಳು ಪ್ರಕರಣವನ್ನು ಮಾಡಿಸಿದ್ದೇನೆ ಎಂದರೆ ಸುಳ್ಳು.

16) ಒಟ್ಟು **3** ಬಾರಿ ನಾನು ಒಳರೋಗಿಯಾಗಿ ಚಿಕಿತ್ಸೆ ಪಡೆದಿದ್ದೇನೆ ಎಂದು ತೋರಿಸಲು **inpatient** ಬಿಲ್ಲುಗಳನ್ನು ಹಾಜರುಪಡಿಸಿಲ್ಲ ಎಂದರೆ ಸುಳ್ಳು.

**ಪಾಟೀ ಸವಾಲು: 1 ನೇ ಎದುರುದಾರರ ಪರ ವಕೀಲರಿಂದಃ**

ಸದರಿ ಎದುರುದಾರರು ಮತ್ತು ಅವರ ಪರ ವಕೀಲರು ಹಾಜರಿಲ್ಲ. ಆದ ಕಾರಣದಿಂದ ಯಾವುದೇ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರು ವಿಚಾರಣೆಃ ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ)

**(ಓ.ಹೇ.ಕೇ.ಸ.ಇ)**

**ಮುಖ್ಯ ನ್ಯಾಯಾಧೀಶರು,**
ಲಘು ವ್ಯವಹಾರಗಳ ನ್ಯಾಯಾಲಯ,
ಬೆಂಗಳೂರು.